# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2014-15ನೇ ಸಾಲಿನಲ್ಲಿ ರಾಸಾಯನಿಕ ಗೊಬ್ಬರಗಳ ತಾತ್ಕಾಲಿಕ ಸಂಗ್ರಹಣಕ್ಕಾಗಿ ಸಹಾಯಧನ ಯೋಜನೆಯಡಿ ತ್ರೈಮಾಸಿಕಗಳಲ್ಲಿ ಬಿಡುಗಡೆಯಾದ ಅನುದಾನವನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಸಂಸ್ಥೆಗೆ ಪಾವತಿಸಲು ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂ:ಕೃಇ/45/ಕೃಯೋಕಾ/2014, ದಿ: 11-04-2014.

2. ಸರ್ಕಾರದ ಆದೇಶ ಸಂ:ಕೃಇ/48/ಕೃಯೋಕಾ/2014, ದಿ: 09-05-2014.

3. ಕೃಷಿ ನಿರ್ದೇಶಕರ ಪತ್ರ ಸಂ: ರಗೊವಿ/Grant-in-Aid/ಅನು/2014-15, ದಿ: 22-05-2014.

**ಪ್ರಸ್ತಾವನೆ:**

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿ: 11-04-2014ರ ಸರ್ಕಾರದ ಆದೇಶದಲ್ಲಿ "ರಾಸಾಯನಿಕ ಗೊಬ್ಬರದ ಮೇಲಿನ ಬಡ್ಡಿ ಸಹಾಯಧನ" ಯೋಜನೆಯನ್ನು "ಬೀಜಗಳ ಪೂರೈಕೆ ಇತರೆ ಹೂಡುವಳಿ ಯೋಜನೆ" ಲೆಕ್ಕ ಶೀರ್ಷಿಕೆ:2401-00-103-0-15 (ಯೋಜನೆ) ರಡಿ 2014-15ನೇ ಸಾಲಿಗೆ ಚಾಲ್ತಿ ಯೋಜನೆಯಾಗಿ ಮುಂದುವರೆಸಲಾಗಿರುತ್ತದೆ. ಪ್ರಸ್ತುತ ವರ್ಷಕ್ಕೆ ಆಯವ್ಯಯದಲ್ಲಿ ಈ ಯೋಜನೆಗೆ ರೂ.9600.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ದಿ: 09-05-2014ರ ಸರ್ಕಾರದ ಆದೇಶದಲ್ಲಿ ಪ್ರಸ್ತುತ ಸಾಲಿನ ಯೋಜನೆಗಳ ಅನುಷ್ಠಾನಕ್ಕಾಗಿ ಮೊದಲನೇ ತ್ರೈಮಾಸಿಕದ ಅನುದಾನ ರೂ.13848.10 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ:2401-00-103-0-15 (ಯೋಜನೆ) ರಡಿ ಬಿಡುಗಡೆ ಮಾಡಿದೆ. ಅದರಲ್ಲಿ "ರಾಸಾಯನಿಕ ಗೊಬ್ಬರದ ಮೇಲಿನ ಬಡ್ಡಿ ಸಹಾಯಧನ" ಯೋಜನೆಗೆ ಲೆಕ್ಕ ಶೀರ್ಷಿಕೆ:2401-00-103-0-15 (ಯೋಜನೆ), ಉಪ ಶೀರ್ಷಿಕೆ:059 ರಡಿ ರೂ.24.00 ಕೋಟಿಗಳನ್ನು ಕಾರ್ಯಕ್ರಮವಾರು ಕೃಷಿ ನಿರ್ದೇಶಕರು ಮರು ಹಂಚಿಕೆ ಮಾಡಿರುತ್ತಾರೆ.

ಮೇಲೆ ಓದಲಾದ (3) ರ ಕೃಷಿ ನಿರ್ದೇಶಕರ ದಿ: 22-05-2014ರ ಪತ್ರದಲ್ಲಿ 2014-15ನೇ ಸಾಲಿನಲ್ಲಿ ರಾಸಾಯನಿಕ ಗೊಬ್ಬರದ ತಾತ್ಕಾಲಿಕ ಸಂಗ್ರಹಣಕ್ಕಾಗಿ ಸಹಾಯಧನ ಯೋಜನೆಯಡಿ ಲೆಕ್ಕ ಶೀರ್ಷಿಕೆ:2401-00-103-0-15 (ಯೋಜನೆ), ಉಪ ಶೀರ್ಷಿಕೆ:059 ರಡಿ ನಾಲ್ಕು ತ್ರೈಮಾಸಿಕಗಳಲ್ಲಿ ಬಿಡುಗಡೆಯಾಗುವ ಅನುದಾನವನ್ನು ಬಡ್ಡಿ ವೆಚ್ಚಕ್ಕಾಗಿ, (ರೂ.65.00 ಕೋಟಿ) ಶೇಖರಣಾ ವೆಚ್ಚಕ್ಕಾಗಿ (ರೂ.20.00 ಕೋಟಿ) & ಸಾಗಾಣಿಕೆ ವೆಚ್ಚಕ್ಕಾಗಿ (ರೂ.11.00 ಕೋಟಿ) (ಒಟ್ಟು ರೂ.96.00 ಕೋಟಿಗಳನ್ನು) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಸಂಸ್ಥೆಗೆ ಪಾವತಿಸಲು ಮಂಜೂರಾತಿ ನೀಡುವಂತೆ ಕೃಷಿ ನಿರ್ದೇಶಕರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/93/ಕೃರಾಗೊ/2014, ಬೆಂಗಳೂರು,**
**ದಿನಾಂಕ: 20-06-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2014-15ನೇ ಸಾಲಿನಲ್ಲಿ ರಾಸಾಯನಿಕ ಗೊಬ್ಬರಗಳ ತಾತ್ಕಾಲಿಕ ಸಂಗ್ರಹಣಕ್ಕಾಗಿ ಸಹಾಯಧನ ಯೋಜನೆ ಬೀಜಗಳ ಪೂರೈಕೆ ಇತರೆ ಹೂಡುವಳಿ ಯೋಜನೆಯ ಲೆಕ್ಕ ಶೀರ್ಷಿಕೆ:2401-00-103-0-15 (ಯೋಜನೆ), ಉಪ ಶೀರ್ಷಿಕೆ:059 ರಡಿ 4 ತ್ರೈಮಾಸಿಕಗಳಲ್ಲಿ ಬಿಡುಗಡೆಯಾಗುವ ಅನುದಾನವನ್ನು ಬಡ್ಡಿ ವೆಚ್ಚಕ್ಕಾಗಿ, ಶೇಖರಣಾ ವೆಚ್ಚಕ್ಕಾಗಿ & ಸಾಗಾಣಿಕೆ ವೆಚ್ಚಕ್ಕಾಗಿ ಕಾಲಮಿತಿಯೊಳಗೆ ಪಾವತಿಸುವ ಷರತ್ತಿನೊಂದಿಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಸಂಸ್ಥೆಗೆ (KSCMF) ಪಾವತಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

..2..

ಸಂಸ್ಥೆಯು ನೀಡುವ ಖರ್ಚುವೆಚ್ಚಗಳ ವಿವರಗಳನ್ನು ಕೃಷಿ ಇಲಾಖೆ ಪರಿಶೀಲಿಸಿ, ನಿಗಧಿತ ಅವಧಿಯೊಳಗೆ ಪಾವತಿಸುವ ಬಗ್ಗೆ ದೃಢೀಕರಿಸಿಕೊಳ್ಳತಕ್ಕದ್ದು ಮತ್ತು ಕಾಲಮಿತಿಯೊಳಗೆ ಪಾವತಿಸದೇ ಬಡ್ಡಿ ವೆಚ್ಚ ಹೆಚ್ಚಾದಲ್ಲಿ ಸಂಸ್ಥೆಯು ಅದನ್ನು ಭರಿಸುವ ಷರತ್ತಿನೊಂದಿಗೆ ಬಿಡುಗಡೆ ಮಾಡಬಹುದಾಗಿದೆ.

ಈ ಸಂಬಂಧ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಸಂಸ್ಥೆಯು ಸಲ್ಲಿಸುವ Grant-in-Aid ಬಿಲ್ಲುಗಳಿಗೆ ಮೇಲು ಸಹಿ ಮಾಡುವ ಅಧಿಕಾರವನ್ನು ಕೃಷಿ ನಿರ್ದೇಶಕರಿಗೆ ನೀಡಲಾಗಿದೆ.

ಸದರಿ ವೆಚ್ಚವನ್ನು 2014-15ನೇ ಸಾಲಿನಲ್ಲಿ 2401-00-103-0-15(059) ಲೆಕ್ಕ ಶೀರ್ಷಿಕೆಯಡಿ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ್ ಪಾಟೀಲ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿರವರಿಗೆ , ವಿಧಾನಸೌಧ.
5. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
6. ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
8. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ನಿಯಮಿತ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು-560 052.
10. ಸಹಕಾರ ಸಂಘಗಳ ನಿಭಂದಕರು, ನಂ-1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.
11. ಸಹಕಾರ ಸಂಘಗಳ ಅಪರ ನಿಭಂದಕರು (ಬಳಕೆ ಮತ್ತು ಮಾರಾಟ), ನಂ-1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.
12. ಡೆಪ್ಯುಟಿ ಜನರಲ್ ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (IFB ಶಾಖೆ), ಎಂ.ಜಿ.ರಸ್ತೆ, ಬೆಂಗಳೂರು-560 001.
13. ನಿರ್ದೇಶಕರು, ಖಜಾನೆ ಇಲಾಖೆ(SHT), ಬೆಂಗಳೂರು.
14. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
15. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
16. ಸರ್ಕಾರದ ಉಪ ಕಾರ್ಯದರ್ಶಿ -1 ಮತ್ತು 2, ಕೃಷಿ ಇಲಾಖೆ.
17. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ.
18. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-4 ಮತ್ತು 5), ಆರ್ಥಿಕ ಇಲಾಖೆ.
19. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.